ಪ್ರವೇಶ ಮಾಡಿದ್ದ. ಆದರೆ, 'ದಂಗಲ್'ನ ಮುಖ್ಯಪಾತ್ರಕ್ಕೆ ಅಮೀರ್ ಮಾತ್ರವೇ ನಿರ್ದೇಶಕರ ಆಯ್ಕೆಯಾಗಿರಲಿಲ್ಲ. ದಕ್ಷಿಣದ ಖ್ಯಾತ ನಟರಾದ ಮಲಯಾಳಂನ ಮೋಹನ್ ಲಾಲ್ ಮತ್ತು ತಮಿಳಿನ ಕಮಲ ಹಾಸನ್ ಕೂಡ ಈ ಪಟ್ಟಿಯಲ್ಲಿದ್ದರು. ಈ ಮೂವರ ಹೊರತಾಗಿ ಮತ್ತೊಬ್ಬ ನಟನಿಂದ ಪಾತ್ರಕ್ಕೆ ಜೀವ ತುಂಬಲು ಸಾಧ್ಯ ಎಂದು ಅನಿಸಿರಲಿಲ್ಲ ಎಂದಿದ್ದಾಳೆ ನಿರ್ಮಾಣ ಸಂಸ್ಥೆ ಯುಟಿವಿ ಮೋಷನ್ ಪಿಕ್ಚರ್ಸ್‌ನ ಕ್ರಿಯೇಟಿವ್





ಪ್ರೊಡ್ಯೂಸರ್ ದಿವ್ಯಾ ರಾವ್. ಹೆಣ್ಣುಮಕ್ಕಳನ್ನು ಅಖಾಡದಲ್ಲಿ ಕುಸ್ತಿಗೆ ಸಜ್ಜುಗೊಳಿಸಿದ ತಂದೆಯ ಕುರಿತು ಪತ್ರಿಕೆಯೊಂದರಲ್ಲಿ ಬಂದ ವರದಿಯನ್ನು ನೋಡಿ, ಇದನ್ನು ಸಿನಿಮಾ ಮಾಡಬೇಕು ಎಂಬ ಆಲೋಚನೆ ಮೂಡಿದ್ದೂ ಆಕೆಯಲ್ಲಿಯೇ. ಮೋಹನ್ ಲಾಲ್ 1977–78ರಲ್ಲಿ ಕೇರಳ ರಾಜ್ಯ ಕುಸ್ತಿ ಚಾಂಪಿಯನ್ ಆಗಿದ್ದವರು. ಕಮಲ್, ಎಂತಹ ಪಾತ್ರವನ್ನಾದರೂ ಆವಾಹಿಸಿಕೊಳ್ಳುವ ಶಕ್ತಿ ಉಳ್ಳವರು. ಕೊನೆಗೆ 'ದಂಗಲ್' ಅಮೀರ್ ಪಾಲಾಯಿತು. ಅಮೀರ್‌ನ ಹೊರತಾಗಿ ಇಬ್ಬರಲ್ಲಿ ಯಾರು ನಟಿಸಿದ್ದರೂ ಸಿನಿಮಾ ಗೆಲ್ಲುತ್ತಿತ್ತು. ಆದರೆ, ಇಷ್ಟು ವ್ಯಾಪಕವಾಗಿ ತಲುಪಲು ಸಾಧ್ಯವಾಗುತ್ತಿರಲಿಲ್ಲ ಎನ್ನುವುದು ಚಿತ್ರತಂಡದ ಅಭಿಪ್ರಾಯ.



## ಪರಿಣೀತಿ ಛತ್ರಿ ಪುರಾಣ!

ಹೆಚ್ಚಿನ ನಟ, ನಟಿಯರ ನೆಚ್ಚಿನ ಸಾಮಾಜಿಕ ಜಾಲತಾಣವೆಂದರೆ ಇನ್‌ಸ್ಟಾಗ್ರಾಂ. ತಮ್ಮ ವೈಯಕ್ತಿಕ ಮತ್ತು ವೃತ್ತಿಗೆ ಸಂಬಂಧಿಸಿದ ಚಿತ್ರಗಳನ್ನು ಇನ್‌ಸ್ಟಾಗ್ರಾಂಗಳಲ್ಲಿ ಹರಿಬಿಡುವ ಖಯಾಲಿ ಕೆಲವರಲ್ಲಿ ತುಸು ಹೆಚ್ಚೇ ಇದೆ. ಹೀಗೆ ಚಿತ್ರವೊಂದನ್ನು ಪೋಸ್ಟ್ ಮಾಡಿದ ಪರಿಣೀತಿ ಚೋಪ್ರಾ ತೀವ್ರ ಟೀಕೆಗೆ ಒಳಗಾಗಿದ್ದಾಳೆ. ದುಬೈನ ಬೀಚ್ ಒಂದರಲ್ಲಿ ನಡೆದುಕೊಂಡು ಹೋಗುತ್ತಿರುವ ವಿಡಿಯೊವೊಂದನ್ನು ಪರಿಣೀತಿ ಪೋಸ್ಟ್ ಮಾಡಿದ್ದಳು. ಬರಿಯ ವಿಡಿಯೊ ಆಗಿದ್ದರೆ ಯಾರೂ ಅದಕ್ಕೆ ಇಷ್ಟು ಆಕ್ರೋಶ ವ್ಯಕ್ತಪಡಿಸುತ್ತಿರಲಿಲ್ಲವೇನೋ. ಆದರೆ, ಅದರಲ್ಲಿ ಕಂಡಿದ್ದು, ಮೂರು ಚೀಲಗಳನ್ನು ಹೊತ್ತ ಸಹಾಯಕನೊಬ್ಬ ಆಕೆಗೆ ಬಿಸಿಲು ಬೀಳದಂತೆ ಛತ್ರಿ ಹಿಡಿದುಕೊಂಡಿರುವುದು. ಒಂದು ಛತ್ರಿ ಹಿಡಿದುಕೊಂಡು ಹೋಗಲಾಗದೆ, ಅದನ್ನೂ ಸಹಾಯಕನ ಕೈಗೆ ಒಪ್ಪಿಸಿ ರಾಣಿಯಂತೆ ನಡೆದುಕೊಂಡು ಹೋಗುತ್ತಿದ್ದಾಳೆ ಎಂದು ಅನೇಕರು ಆಕೆಯ ವರ್ತನೆ ಖಂಡಿಸಿ ಕಾಮೆಂಟ್‌ಗಳನ್ನು ಮಾಡಿದ್ದರು. 'ಬಹುಶಃ ಛತ್ರಿ ನೂರು ಕೆ.ಜಿ. ತೂಕವಿರಬೇಕು' ಎಂದು ಲೇವಡಿ ಮಾಡಿದ್ದರೆ, 'ನಿಮ್ಮ ಛತ್ರಿಯನ್ನು ನೀವೇ ಹಿಡಿದುಕೊಳ್ಳುವುದು ನಿಮ್ಮ ಸ್ಟಾರ್‌ಗಿರಿಯನ್ನೇನೂ ಕಡಿಮೆ ಮಾಡುವುದಿಲ್ಲ' ಎಂದು ಕಿಡಿಕಾರಿದ್ದರು. ತನ್ನ ಪೋಸ್ಟ್ ವಿವಾದ ಸೃಷ್ಟಿಸಿರುವುದು ಅರಿವಾಗುತ್ತಲೇ ಪರಿಣೀತಿ ಅದನ್ನು ಅಳಿಸಿ ಹಾಕಿದ್ದಾಳೆ.

ಪರಿಣೀತಿ ಈ ರೀತಿ ಸಂವೇದನಾರಹಿತಳಾಗಿ ವರ್ತಿಸಿರುವುದು ಇದೇ ಮೊದಲಲ್ಲ. ತನ್ನ ಗೆಳತಿಯೊಬ್ಬಳ ಜನ್ಮದಿನದಂದು 'ಕಡಿಮೆ ತಿನ್ನು– ತೆಳ್ಳಗಾಗು' ಎಂದು ಆಕೆಗೆ 'ಶುಭಾಶಯ'ದ ಸಂದೇಶ ಹಾಕಿದ್ದನ್ನು, ದಪ್ಪಗಿರುವುದಕ್ಕೆ ಸ್ನೇಹಿತೆಯನ್ನು ಅವಮಾನಿಸಿದ್ದಾಳೆ ಎಂದು ಟೀಕಿಸಲಾಗಿತ್ತು. ಸ್ನೇಹಿತೆಯ ದೇಹಾಕೃತಿಯ ಕುರಿತು ಸಾರ್ವಜನಿಕವಾಗಿ ಮಾತನಾಡಿದ್ದು ಸರಿಯಲ್ಲ ಎಂದು ಆಕ್ಷೇಪಗಳು ವ್ಯಕ್ತವಾಗಿದ್ದವು. ಸ್ವತಃ ದಪ್ಪಗಿದ್ದ ಪರಿಣೀತಿ, ಡಯೆಟ್ ಮಾಡಿ ತೆಳ್ಳಗಾಗಿದ್ದಾಳೆ. ಸ್ನೇಹಿತೆಗೆ ಹೀಗೆ ಹೇಳಿದ್ದರಲ್ಲಿ ಅವಮಾನ ಉಂಟುಮಾಡುವುದು ಏನೂ ಇಲ್ಲ ಎಂದು ಅಲಿಯಾ ಭಟ್, ಪರಿಣೀತಿಯನ್ನು ಸಮರ್ಥಿಸಿಕೊಂಡಿದ್ದಳು. ಆದರೆ, ಛತ್ರಿ ಪ್ರಕರಣದಲ್ಲಿ ಆಕೆಯ ಬೆಂಬಲಕ್ಕೆ ಯಾರೂ ಬಂದಿಲ್ಲ.

■ ಅಮಿ